
# ಆಧ್ಯಾತ್ಮಿಕ ಸಾಧಕರಿಗೆ 'ವಚನವೇದ' ದ ಮಹತ್ವ

ಸ್ವಾಮಿ ರಾಘವೇಶಾನಂದ

**'ಶ್ರೀರಾಮಕೃಷ್ಣ ವಚನವೇದ' ವು ಆಧ್ಯಾತ್ಮಿಕ ಜೀವನಕ್ಕೆ ಕೈಪಿಡಿಯಂತೆ ಇದೆ. ಪ್ರಾಮಾಣಿಕವಾಗಿ ಭಗವಂತನನ್ನು ಆರಾಧಿಸುವ ಎಲ್ಲರಿಗೂ ಆಪ್ಯಾಯಮಾನವಾದ ಸಲಹೆ, ಸಾಂತ್ವನ ಮತ್ತು ಸ್ಫೂರ್ತಿಯ ಭಾವನೆಗಳು ಇಲ್ಲಿವೆ. ಈ ಅಂಶವನ್ನು ನಿದರ್ಶನಗಳ ಮೂಲಕ ಮನಮುಟ್ಟುವಂತೆ ವಿವರಿಸಿರುವ ಸ್ವಾಮೀಜಿಯವರು ಹೆಸರಾಂತ ಭಾಷಣಕಾರರು, ಲೇಖಕರು. ಇವರು ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮದ ಮುಖ್ಯಸ್ಥರು.**

ಶ್ರೀರಾಮಕೃಷ್ಣ ವಚನವೇದ ಒಂದು ಮೇರುಕೃತಿ. ಯಾವುದೇ ಅಭಿಪ್ರಾಯವನ್ನು ಉದ್ವೇಗದಿಂದ ಹೇಳದೆ, ಯಾವುದನ್ನೂ ಯಾವ ಕಾರಣಕ್ಕಾಗಿಯೂ ಉತ್ಪ್ರೇಕ್ಷೆ ಮಾಡದೆ ಇದ್ದ ನಮ್ಮ ರಾಷ್ಟ್ರಕವಿ ಕುವೆಂಪು ಅವರು ವಚನವೇದಕ್ಕೆ ಬರೆದಿರುವ ಮುನ್ನುಡಿಯ ಒಂದು ಮಾತು ಸಾಧಕರಿಗೆ ಅದರ ಮಹತ್ವವನ್ನು ಮನಗಾಣಿಸುತ್ತದೆ: "'ಶ್ರೀರಾಮಕೃಷ್ಣ ವಚನವೇದ'ವೆಂದರೆ ಅದೊಂದು ಕರತಲ ದೇವಸ್ಥಾನ, ಕರತಲ ತಪೋರಂಗ, ಕರತಲ ಪುಣ್ಯಕ್ಷೇತ್ರ. ಆದರೆ ದೇವಸ್ಥಾನ ಪುಣ್ಯಕ್ಷೇತ್ರಗಳಂತೆ ತಾನೆಂದಿಗೂ ಕಲುಷಿತವಾಗುವ ಸಂಭವವಿಲ್ಲ, ಶಿಥಿಲವಾಗುವ ಸಂಭವವಿಲ್ಲ. ಯಾವ ಮನೆಯಲ್ಲಿ ಈ ವಚನವೇದ ಇರುತ್ತದೆಯೊ ಅದು ಮಂದಿರವಾಗುತ್ತದೆ. ಯಾರ ಕೈ ಇದನ್ನು ಹಿಡಿದಿರುತ್ತದೆಯೊ ಅದು ಭಗವಂತನ ಪಾದಾರವಿಂದವನ್ನೇ ಧರಿಸಿರುತ್ತದೆ. ಯಾರ ಜಿಹ್ವೆ ಇದನ್ನು ಪಠಿಸುತ್ತದೆಯೊ ಅದು ಅಮೃತವನ್ನೇ ಈಂಟುತ್ತಿರುತ್ತದೆ. ಇದು ಆನಂದದ ಆಗರ; ಶಾಂತಿಯ ಸಾಗರ; ದಿವ್ಯ ಜ್ಞಾನದ ಓಗರ. ಕಷ್ಟದ ಸಮಯದಲ್ಲಿ ಧೈರ್ಯವೀಯುವ ಸಖ; ಸುಖದ ಸಮಯದಲ್ಲಿ ಸಮರ್ಪಣಭಾವವಿತ್ತು ವಿನಯ ಭಕ್ತಿಗಳನ್ನು ಪ್ರಚೋದಿಸುವ ಗುರು; ಕತ್ತಲಲ್ಲಿ ದೀಪ; ದಾರಿಗೆ ಊರುಗೋಲು; ದಿಕ್ಕುಗೆಡದಂತೆ ಗುರಿದೋರುವ ಧ್ರುವತಾರೆ. ಇಲ್ಲಿ ವೇದ ವೇದಾಂತ ದರ್ಶನಾದಿ ಸರ್ವಸಾರವಿದೆ. ಓದು ಬರುವ ಅತ್ಯಂತ ಸಾಮಾನ್ಯನೂ ಇದನ್ನು ಓದಿದ ಮೇಲೆ ಯಾವ ಪಂಡಿತನಿಗೂ ಕರುಬುವ ಅವಶ್ಯಕತೆಯಿಲ್ಲ; ಯಾವ ವಿದ್ವತ್‌ಪೂರ್ಣವಾದ ತತ್ತ್ವಜ್ಞಾನಿಗೂ ಕೀಳೆಂದು ನಾಚಬೇಕಾಗಿಲ್ಲ. ಅದಕ್ಕೆ ಬದಲು ಭಗವಂತನ ಕೃಪೆಯಿಂದ ತನಗಿಂತಲೂ ಧನ್ಯರಿಲ್ಲ ಎಂದರಿತು ನಿರ್ಮಮನಾಗುತ್ತಾನೆ, ಶಾಂತನಾಗುತ್ತಾನೆ, ಪೂರ್ಣವಾಗುತ್ತಾನೆ."



'ವಚನವೇದ' ದ ಕರ್ತೃ 'ಮ'
(ಮಹೇಂದ್ರನಾಥ ಗುಪ್ತ)

ಸಾಂಪ್ರದಾಯಿಕ ತತ್ತ್ವಶಾಸ್ತ್ರದಲ್ಲಿ ಆರು ಪ್ರಮಾಣಗಳನ್ನು ಹೇಳುತ್ತಾರೆ. ಅವುಗಳಲ್ಲಿ ಶಬ್ದಪ್ರಮಾಣಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ. ಇಲ್ಲಿ 'ಶಬ್ದಪ್ರಮಾಣ ' ಎಂದರೆ ವೇದ. ವೇದ ಎಂದರೆ ಜ್ಞಾನ. ಉಪನಿಷತ್ತುಗಳಲ್ಲಿ ಹೇಳಿರುವ 'ಅಹಂ ಬ್ರಹ್ಮಾಸ್ಮಿ', 'ತತ್ತ್ವಮಸಿ' ಮುಂತಾದ ನಾಲ್ಕು ಮಹಾವಾಕ್ಯಗಳ ಶ್ರವಣ ಮತ್ತು ಅನುಸಂಧಾನದಿಂದ ಜ್ಞಾನ ಉಂಟಾಗುತ್ತದೆ ಎಂದು ನಂಬಿಕೆ. ಈ ಮಹಾವಾಕ್ಯಗಳನ್ನು ಗುರುವು ಉಪದೇಶಿಸಬೇಕು. ಹೀಗೆ ವೇದಾಂತವು ಜ್ಞಾನಪ್ರಾಪ್ತಿಗೆ ಎರಡು ಮುಖ್ಯ ಆವಶ್ಯಕತೆಗಳನ್ನು ಒತ್ತಿ ಹೇಳುತ್ತದೆ: ಒಂದು **ಗುರು,** ಮತ್ತೊಂದು **ವೇದ.**

'ಶ್ರೀರಾಮಕೃಷ್ಣ ವಚನವೇದ' ದಲ್ಲಿ ಇವೆರಡೂ ಇವೆ. ಇಲ್ಲಿ ಶ್ರೀರಾಮಕೃಷ್ಣರು ನಿತ್ಯ ಚಿರಂತನ 'ಗುರು' ವಾಗಿ ಕಂಗೊಳಿಸುತ್ತಾರೆ. ಅವರ ವಚನಗಳು 'ವೇದ'ದಂತೆ ಅಧಿಕೃತತೆ ಉಳ್ಳವುಗಳಾಗಿ ಪ್ರಮಾಣಬದ್ಧವಾಗಿವೆ. ಈ ಪುಸ್ತಕದ ಕನ್ನಡ ಅನುವಾದಕ್ಕೆ ಈ ಹೆಸರನ್ನು ಸೂಚಿಸಿದವರು ಕೂಡ ಶ್ರೀಕುವೆಂಪು ಅವರೇ. ಅದಕ್ಕೆ ಕಾರಣವನ್ನೂ ಅವರೇ ನೀಡುತ್ತಾರೆ: "ವೇದ ಎಂದರೆ ನಿತ್ಯ ಜ್ಞಾನ. ಅದು ಸನಾತನ. ಅದು ಅಪೌರುಷೇಯ. ಅಂದರೆ ಯಾವ ಮಾನವ ವ್ಯಕ್ತಿಯಿಂದಲೂ ಹುಟ್ಟಿ ಬಂದುದಲ್ಲ.. ಅಂತೂ ಸದ್ಯಕ್ಕೆ ಅತೀತವಾಗಿರುವ 'ವೇದ' ಅನಂತವಾಗಿರುವುದರಿಂದ 'ಲೋಕ'ಕ್ಕಿಳಿಯುವ ನಮ್ಮ ವೇದವೂ ಕೊನೆಯಿಲ್ಲದೆ ಮುಂದುವರಿಯುವುದರಲ್ಲಿ ಸಂದೇಹವಿಲ್ಲ. ಶ್ರೀರಾಮಕೃಷ್ಣರಂತಹ ಸಿದ್ಧ ಪುರುಷನ, ಮಹರ್ಷಿಯ, ದ್ರಷ್ಟಾರನ, ಅವತಾರವರಿಷ್ಠನ

ವಾಕ್‌ಶ್ರೀಯನ್ನು 'ವಚನವೇದ' ಎಂದು ಕರೆಯುವುದರಲ್ಲಿ ಅನೌಚಿತ್ಯವೆಲ್ಲಿ ಬಂತು? ಈ 'ವಚನವೇದ' ವೇದಗಳೂ ಮಾಡದ ಕೆಲಸವನ್ನು ಮಾಡುತ್ತದೆ.. ಈ 'ವಚನವೇದ' ನಮ್ಮನ್ನುದ್ಧರಿಸಿ, ಉದಾರಧೀರರನ್ನಾಗಿ ಮಾಡಿ, ಸಂರಕ್ಷಿಸುತ್ತದೆ, ಜೀವನ್ಮುಕ್ತಿಗೆ ನಡೆಸುತ್ತದೆ."

ಆಧ್ಯಾತ್ಮಿಕ ಸಾಧಕರಿಗೆ ಇದಕ್ಕಿಂತ ಮತ್ತಾವ ಭರವಸೆ ಬೇಕು? ಬೇರೆ ಯಾವ ಮಾರ್ಗದರ್ಶನ ತಾನೇ ಆವಶ್ಯಕ? 'ಶ್ರೀರಾಮ ಕೃಷ್ಣ ವಚನವೇದ' ವು ಭಗವಂತನ ಸಾಕ್ಷಾತ್ಕಾರಕ್ಕಾಗಿ ಇರುವ ನೇರ ಕೃತಿ ಎಂದು ಧಾರಾಳವಾಗಿ ಹೇಳಬಹುದು.

ವೇದಗಳಲ್ಲಿ ನಾವು ಏನು ಕಾಣುತ್ತೇವೆ? ಮಂತ್ರಗಳನ್ನು. ಶ್ರೀರಾಮಕೃಷ್ಣರ ಬಾಯಿಯಿಂದ ಬಂದಿರುವ ಒಂದೊಂದು ಮಾತು ಕೂಡ ಒಂದೊಂದು ಮಂತ್ರವೇ ಸರಿ. ಏಕೆಂದರೆ ಅವರು ಸತ್ಯವ್ರತರು, ಸತ್ಯನಿಷ್ಠರು. ಇದನ್ನು ನಾವು ಅವರ ಜೀವನದ ಅಧ್ಯಯನದಿಂದ ಖಚಿತಪಡಿಸಿಕೊಳ್ಳಬಹುದು. ಶ್ರೀರಾಮಕೃಷ್ಣರ ಮಾತುಗಳೆಂಬ ಮಂತ್ರಗಳು ಯಾರ ಮೇಲೆ, ಯಾವಾಗ ಪರಿಣಾಮ ಬೀರಿ ಅವರ ಜೀವನವನ್ನು ಬದಲಾಯಿಸು ತ್ತವೆಯೋ ಹೇಳಲಾಗದು. ಇದಕ್ಕೆ ಎರಡು ಉದಾಹರಣೆಗಳನ್ನು ನೋಡೋಣ. ಗ್ರಂಥಕರ್ತನದೇ ಮೊದಲ ಉದಾಹರಣೆ. ಮಹೇಂದ್ರನಾಥ ಗುಪ್ತನು ಒಟ್ಟು ಕುಟುಂಬದಲ್ಲಿ ಬಾಳಿದವನು. ಉಪಾಧ್ಯಾಯನಾಗಿ ಅವನು ತನ್ನ ವೃತ್ತಿಯನ್ನು ಆರಂಭಿಸಿದನು. ಆದರೆ ಗೃಹಸ್ಥನಾಗಿ ಕೆಲವೇ ವರ್ಷಗಳಲ್ಲಿ ಅವನ ಮನೆಯಲ್ಲಿ ಕಲಹವೋ ಕಲಹ. ಅಲ್ಲಿ ನೆಮ್ಮದಿಯೂ ಇಲ್ಲ, ಶಾಂತಿಯೂ ಇಲ್ಲ. ಒಮ್ಮೆ ಬೇರೆ ಏನೂ ದಾರಿ ಕಾಣದೆ, ಆತ್ಮಹತ್ಯೆ ಮಾಡಿಕೊಳ್ಳುವುದೆಂದು ಅವನು ತೀರ್ಮಾನಿಸಿದ್ದನು. ಆದರೆ ಒಂದು ದಿನ ವಿಧಿಯೇ ಅವನನ್ನು ಅಚಾನಕವಾಗಿ ದಕ್ಷಿಣೇಶ್ವರದ ಉದ್ಯಾನವನಕ್ಕೆ ಕರೆದುಕೊಂಡುಬಂದಿತು. ಅಲ್ಲಿ ಸುತ್ತಾಡುತ್ತಿದ್ದ ಅವನು ಅಕಸ್ಮಾತ್ತಾಗಿ ಶ್ರೀರಾಮಕೃಷ್ಣರ ಕೊಠಡಿಯನ್ನು ಪ್ರವೇಶಿಸಿದ. ಅಲ್ಲಿ ಆದ ಅನುಭವವನ್ನು ವಚನವೇದವು ಹೀಗೆ ವಿವರಿಸುತ್ತದೆ: "ಮಾಸ್ಟರ್ ಮಂತ್ರಮುಗ್ಧನಾಗಿ ಸುಮ್ಮನೆ ನಿಂತು ನೋಡಲಾರಂಭಿಸಿದ. ಆತನಿಗೆ ತೋರಿತು, ಸಾಕ್ಷಾತ್ ಶುಕದೇವನೇ ಭಗವದ್ವಿಷಯವಾಗಿ ಅಲ್ಲಿ ಮಾತನಾಡುತ್ತಿರುವ ಹಾಗೆ, ಸರ್ವತೀರ್ಥಗಳೂ ಸಮಾಗಮವಾಗಿರುವ ಹಾಗೆ."

ಶುಕಮಹರ್ಷಿಯಾದರೂ ಯಾರು? ಅವನೊಬ್ಬ ಹುಟ್ಟು ಬ್ರಹ್ಮಜ್ಞಾನಿ. ಅವನಿಂದ ಬಂದ ಮಾತುಗಳು ಯಾವುವು? ಭಾಗವತವೆಂಬ ಪುರಾಣರತ್ನ. ಅದನ್ನು ವೇದಕ್ಕೆ ಸಮಾನವಾಗಿ ಪೂಜ್ಯಭಾವದಿಂದ ನೋಡುತ್ತಾರೆ. ಅದೇ ರೀತಿ ಶ್ರೀರಾಮಕೃಷ್ಣರ ಮುಖಾರವಿಂದದಿಂದ ಬರುತ್ತಿದ್ದ ಮಾತುಗಳು ಕೂಡ ವೇದಸದೃಶವಾದವು. ಆದುದರಿಂದಲೇ ಮಾಸ್ಟರ್ ಮಹಾಶಯನಿಗೆ ಶುಕಮುನಿಯ ಸ್ಮರಣೆ ಆಯಿತು. ಶ್ರೀರಾಮಕೃಷ್ಣರ ಸಂಪರ್ಕದಿಂದ ಮಾಸ್ಟರ್ ಮಹಾಶಯ ಕೂಡ ಋಷಿಸದೃಶ ವ್ಯಕ್ತಿಯಾದ.

ಈಗ 'ಶ್ರೀರಾಮಕೃಷ್ಣ ವಚನವೇದ'ವು ಆಧುನಿಕ ಕಾಲದ ವ್ಯಕ್ತಿಗಳ ಮೇಲೂ ಹೇಗೆ ಪರಿಣಾಮ ಬೀರುತ್ತಿದೆ ಎನ್ನುವುದನ್ನು ನೋಡೋಣ. ಅಮೆರಿಕ ದೇಶದ ಬಾಸ್ಟನ್ ನಗರದಲ್ಲಿ MIT (Massachusetts Institute of Technology) ಎಂಬ ಸುಪ್ರಸಿದ್ಧ ವಿದ್ಯಾಸಂಸ್ಥೆಯಿದೆ. ಬಾಸ್ಟನ್‌ನಲ್ಲಿ ಇರುವ ವೇದಾಂತ ಕೇಂದ್ರದ ಮುಖ್ಯಸ್ಥರಾಗಿದ್ದ ಸ್ವಾಮಿ ಸರ್ವಗತಾನಂದರು ಅಲ್ಲಿಗೆ ಪ್ರವಚನ ಮಾಡಲು ಹೋಗುತ್ತಿದ್ದರು. ಅವರ ಭಾಷಣಗಳಿಂದ ಪ್ರಭಾವಿತರಾಗಿ ಅನೇಕ ವಿದ್ಯಾರ್ಥಿಗಳು ಆಶ್ರಮಕ್ಕೂ ಬರುತ್ತಿದ್ದರು. ಅವರಲ್ಲಿ ಒಬ್ಬ ವಿದ್ಯಾರ್ಥಿಯು ಸ್ವಾಮಿ ಸರ್ವಗತಾನಂದರಿಗೆ ಅತ್ಯಂತ ಪರಿಚಯದವನಾದ. ಕಾಲೇಜು ವಿದ್ಯಾಭ್ಯಾಸವನ್ನು ಮುಗಿಸಿದ ಮೇಲೆ, ಕೆಲಸಕ್ಕೆ ಸೇರಿದ; ಮದುವೆಯೂ ಆದ. ಮದುವೆಯ ಸಂದರ್ಭದಲ್ಲಿ ಸ್ವಾಮಿ ಸರ್ವಗತಾನಂದಜಿ ಅವರು ಅವನಿಗೆ ಶ್ರೀರಾಮಕೃಷ್ಣ ವಚನವೇದದ ಇಂಗ್ಲಿಷ್ ಆವೃತ್ತಿಯಾದ The Gospel of Sri Ramakrishna ಎಂಬ ಪುಸ್ತಕವನ್ನು ಉಡುಗೊರೆಯಾಗಿ ನೀಡಿದರು. ಅವನ ಪತ್ನಿಯೂ ಆಶ್ರಮದ ಭಕ್ತಳಾದಳು. ಕೆಲವು ದಿನಗಳಲ್ಲಿಯೇ ಈ ಪುಸ್ತಕವನ್ನು ಓದಿ ಅವರಿಬ್ಬರಿಗೂ ಬೇಜಾರಾಯಿತು. ಒಂದು ದಿನ ಆ ಯುವಕ ಸ್ವಾಮೀಜಿಯ ಹತ್ತಿರ ಬಂದು ಹೇಳಿದ, "ಸ್ವಾಮೀಜಿ, ತಾವು ಬೇಜಾರು ಮಾಡಿಕೊಳ್ಳದಿದ್ದರೆ ಆ ಪುಸ್ತಕವನ್ನು ಹಿಂದಿರುಗಿಸು ತ್ತೇನೆ. ಅದರಲ್ಲಿ 'ಕಾಮಿನಿಕಾಂಚನತ್ಯಾಗ'ದ ಮಾತು ಬಿಟ್ಟರೆ ಬೇರೆ ಏನೂ ಇಲ್ಲ. ಮತ್ತೆ ಮತ್ತೆ ಅದನ್ನೇ ಹೇರುತ್ತಾರೆ." ಸ್ವಾಮೀಜಿ ನಕ್ಕು, "ಅದರ ಕಡೆ ಗಮನ ನೀಡಬೇಡ. ನಿನಗೆ ಇಷ್ಟವಾದ ಇತರ ವಿಷಯಗಳನ್ನು ಓದು" ಎಂದರು.

ಬಹಳ ದಿನಗಳಾದ ನಂತರ ಹಠಾತ್ತನೆ ಆ ಯುವಕ ಮತ್ತೆ ಬಂದ. ನೇರವಾಗಿ ಸ್ವಾಮೀಜಿಯವರನ್ನು, "ಸ್ವಾಮೀಜಿ ನಿಮ್ಮ ಬಳಿ ಈ ಪುಸ್ತಕದ ಎಷ್ಟು ಪ್ರತಿಗಳು ಇವೆ?" ಎಂದು ಪ್ರಶ್ನಿಸಿದ. ಸ್ವಾಮಿ ಸರ್ವಗತಾನಂದರು ನಗುತ್ತ, "ಏನೋ, ನೀನು ಅವನ್ನೆಲ್ಲ ಕೊಂಡುಕೊಂಡು ಬೆಂಕಿಗೆ ಹಾಕಬೇಕೆಂದಿದ್ದೀಯಾ?" ಎಂದು ಕೇಳಿದರು. ಅದಕ್ಕೆ ಅವನು, "ಛೇ, ಛೇ, ಈ ಪುಸ್ತಕವನ್ನು ನಾನು ನನ್ನ ಸ್ನೇಹಿತರಿಗೆಲ್ಲ ಉಡುಗೊರೆಯಾಗಿ ಹಂಚಬೇಕೆಂದಿದ್ದೇನೆ" ಎಂದು ಹೇಳಿದನು.

ಸ್ವಾಮೀಜಿ ಮತ್ತೆ ಕೇಳಿದರು, "ಏಕೆ? ಏನಾಯಿತು?" ಅವನು ಹೇಳಿದ, " ನಿಮಗೆ ಗೊತ್ತಿಲ್ಲ. ಕೆಲವು ದಿನಗಳ ಹಿಂದೆ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದಲ್ಲಿ ಒಂದು ವಿಚಾರಗೋಷ್ಠಿ ಏರ್ಪಾಡಾಗಿತ್ತು. ಅದರ ವಿಷಯ, 'The Modern American Trend' (ಅಮೆರಿಕದ ಆಧುನಿಕ ಬೆಳವಣಿಗೆಗಳು) ಎಂದು. ಅದರಲ್ಲಿ ಮನಃಶಾಸ್ತ್ರಜ್ಞರು, ಧಾರ್ಮಿಕ ಮುಖಂಡರು, ವಿಜ್ಞಾನಿ ಗಳು, ಪ್ರಾಧ್ಯಾಪಕರು – ಹೀಗೆ ಹಲವಾರು ಕ್ಷೇತ್ರಗಳಿಂದ ಭಾಗವಹಿಸಿದ್ದರು. ಅವರೆಲ್ಲ ರಾಜಕೀಯ, ಅಧಿಕಾರ, ಆರ್ಥಿಕ ಪರಿಸ್ಥಿತಿ ಇತ್ಯಾದಿ ಹಲವಾರು ವಿಷಯಗಳನ್ನು ಕುರಿತು ಚರ್ಚಿಸಿದರು. ಕೊನೆಗೆ ಒಬ್ಬ ಸಮಾಜವಿಜ್ಞಾನಿ ಎದ್ದು ನಿಂತು


ಹೀಗೆ ಹೇಳಿದ: 'ಅಮೇರಿಕದಲ್ಲಿ ಈಗ ನಾವೆಲ್ಲ ಪೂಜೆ ಮಾಡುತ್ತಿರುವುದು 'ಡಾಲರ್' ಎಂಬ ರಾಜನನ್ನು, 'ಕಾಮ' ವೆಂಬ ರಾಣಿಯನ್ನು'. ಖಂಡಿತವಾಗಿಯೂ ಇದು ನಮ್ಮನ್ನು ವಿನಾಶದತ್ತ ಕೊಂಡೊಯ್ಯುತ್ತದೆ.' ತಕ್ಷಣ ನನಗೆ ನೀವು ಕೊಟ್ಟ ಶ್ರೀರಾಮಕೃಷ್ಣ ವಚನವೇದ ಪುಸ್ತಕ ಜ್ಞಾಪಕಕ್ಕೆ ಬಂದಿತು. ಏಕೆ ಶ್ರೀರಾಮಕೃಷ್ಣರು ಕಾಮಿನಿಕಾಂಚನತ್ಯಾಗವನ್ನು ಇಷ್ಟೊಂದು ನಮ್ಮ ಮೇಲೆ ಹೇರುತ್ತಿದ್ದಾರೆ ಎನಿಸಿತ್ತು. ಆದರೆ ಅದರ ಪ್ರಾಮುಖ್ಯತೆ ಈಗ ನನಗೆ ಅರ್ಥವಾಗಿದೆ. ಆದುದರಿಂದ ನನ್ನ ಸ್ನೇಹಿತರನ್ನೂ ಉದ್ಧಾರಮಾಡಲು ನಾನು ಈ ಪುಸ್ತಕವನ್ನು ಅವರಿಗೆ ಕೊಡಲು ಬಯಸುತ್ತೇನೆ." ಹೀಗೆ ಹೇಳಿದ ಆ ಯುವಕ ಬಾಸ್ಟನ್ ಆಶ್ರಮದಲ್ಲಿ ಇದ್ದ ಶ್ರೀರಾಮಕೃಷ್ಣ ವಚನವೇದದ ಎಲ್ಲ ಪುಸ್ತಕಗಳನ್ನೂ ಕೊಂಡುಕೊಂಡು ಹೋಗಿಬಿಟ್ಟ.

ಹೀಗೆ ಶ್ರೀರಾಮಕೃಷ್ಣ ವಚನವೇದವು ಪ್ರಪಂಚದ ನಾನಾ ಭಾಗಗಳಲ್ಲಿ ಜನರನ್ನು ಆಧ್ಯಾತ್ಮಿಕತೆಯತ್ತ ಕರೆದುಕೊಂಡು ಹೋಗಲು, ಭಗವಂತನ ಸಾಕ್ಷಾತ್ಕಾರ ಮಾಡಿಸಲು ತನ್ನದೇ ಆದ ರೀತಿಯಲ್ಲಿ ನೀರವವಾಗಿ ಕೆಲಸ ಮಾಡುತ್ತಿದೆ.

ಒಂದು ದಿನ ಒಬ್ಬ ಯುವಕ ಬಹಳ ಅವಸರದಿಂದ ಸ್ವಾಮಿ ಬ್ರಹ್ಮಾನಂದಜಿ ಮಹಾರಾಜ್ ಅವರನ್ನು ನೋಡಲು ಬಂದ. ಸ್ವಾಮಿಗಳು ಯಾವುದೋ ಊರಿಗೆ ಹೋಗಲು, ರೈಲುಗಾಡಿಯಲ್ಲಿ ಕುಳಿತಿದ್ದರು. ರೈಲುಗಾಡಿ ಇನ್ನೇನು ಹೊರಡುವುದರಲ್ಲಿತ್ತು. ಅವನು ಸ್ವಾಮೀಜಿಯವರನ್ನು ಅಂಗಲಾಚಿ ಕೇಳಿದ, "ಸ್ವಾಮೀಜಿ, ನನಗೆ ಭಗವಂತನ ಸಾಕ್ಷಾತ್ಕಾರವನ್ನು ಮಾಡಿಕೊಳ್ಳುವ ಉತ್ಕಟ ಇಚ್ಛೆಯಿದೆ. ದಯವಿಟ್ಟು ಏನಾದರೂ ಉಪದೇಶ ನೀಡಿ." ಸ್ವಾಮಿ ಬ್ರಹ್ಮಾನಂದರು ಅವನ ಕಡೆ ನೋಡಿದರು. ಸಾಧಕನ ಲಕ್ಷಣಗಳು ಅವನ ಕಣ್ಣುಗಳಲ್ಲಿ ಕಾಣಿಸಿಕೊಂಡವು, ಅವನ ಮುಖದಲ್ಲಿ ವ್ಯಾಕುಲತೆ ಪ್ರಕಟವಾಗಿತ್ತು. ಅವರು ಮುಗುಳ್ನಗುತ್ತ ಹೇಳಿದರು, "ಭಗವಂತನ ಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂದಿದ್ದರೆ, ಪ್ರತಿದಿನ 'ಶ್ರೀರಾಮಕೃಷ್ಣ ವಚನವೇದ' ವನ್ನು ಅಧ್ಯಯನ ಮಾಡು." ಅಷ್ಟರಲ್ಲಿ ರೈಲುಗಾಡಿ ಹೊರಟಿತು.

ನಿಮ್ಮ ದಿನನಿತ್ಯದ ತಾಪತ್ರಯಗಳಿಂದ ನಿಮ್ಮ ಮನಸ್ಸು ನೊಂದಿದ್ದರೆ, ನಿಮ್ಮ ಸಮಸ್ಯೆಗಳಿಗೆ ಪರಿಹಾರ ಬೇಕಿದ್ದರೆ, ಕಣ್ಣು ಮುಚ್ಚಿ ಶ್ರೀರಾಮಕೃಷ್ಣರನ್ನು ನೆನೆಯಿರಿ. ಅನಂತರ, 'ವಚನ ವೇದ'ದ ಯಾವುದಾದರೂ ಒಂದು ಪುಟವನ್ನು ನಿಧಾನವಾಗಿ ಓದಿ. ಅಲ್ಲಿ ನಿಮಗೆ ಸರಿಯಾದ ಸಲಹೆ ಸೂಚನೆಗಳು ಸಿಗುತ್ತವೆ. ಆಧ್ಯಾತ್ಮಿಕ ಜೀವನದ ಬಗ್ಗೆ ಮನಸ್ಸಿನಲ್ಲಿ ಸಂದೇಹಗಳು ಮೂಡಿದಾಗ, ಆಧ್ಯಾತ್ಮಿಕ ಏಳ್ಗೆಯಲ್ಲಿ ನೀವು ಪ್ರಗತಿ ಕಾಣದಿದ್ದರೆ, ವಚನವೇದವನ್ನು ತೆಗೆದುನೋಡಿರಿ. ಅದರಲ್ಲಿ ಶ್ರೀರಾಮಕೃಷ್ಣರ ಭರವಸೆಯ ನುಡಿಗಳು, ನಿಮ್ಮ ಕೈಹಿಡಿದು ನಡೆಸಲು ಸದಾ ಸಿದ್ಧವಾಗಿರುವುದನ್ನು ಕಾಣುತ್ತೀರಿ.

## ಉತ್ತಮ ಗ್ರಾಹಕರಾಗಿ ಶ್ರೀರಾಮಕೃಷ್ಣರು



ಶ್ರೀರಾಮಕೃಷ್ಣರ ಮನಸ್ಸು ಸದಾ ಭಗವದ್ಭಕ್ತಿಯಿಂದ ತುಂಬಿ ತುಳುಕಾಡುತ್ತಿತ್ತು. ಆದರೂ ವ್ಯವಹಾರದಲ್ಲಿ ಅವರು ಅಜಾಗರೂಕರಾಗಿರಲಿಲ್ಲ. ಶ್ರೀಶಾರದಾದೇವಿಯವರಿಗೆ ಜಪ ತಪ ಧ್ಯಾನಗಳ ಜೊತೆಗೆ ಅವರು ಲೌಕಿಕ ಜಗತ್ತಿನಲ್ಲಿ ಹೇಗೆ ವ್ಯವಹರಿಸಬೇಕು ಎಂಬುದನ್ನೂ ಬೋಧಿಸಿದ್ದರು. ಒಂದು ದಿನ ಶ್ರೀಮಾತೆಯವರು ತರಕಾರಿ ಹೆಚ್ಚುತ್ತಿದ್ದಾಗ, ಸ್ವಲ್ಪ ಹೆಚ್ಚು ಸಿಪ್ಪೆಯನ್ನು ತೆಗೆಯುತ್ತಾರೆ. ಅದಕ್ಕೆ ಶ್ರೀರಾಮಕೃಷ್ಣರು ಹೀಗೆ ಹೇಳುತ್ತಾರೆ: " ಸಿಪ್ಪೆ ತೆಗೆಯಬೇಕು ಎಂದರೆ ತರಕಾರಿಯ ಒಂದು ಭಾಗವನ್ನೇ ಕಿತ್ತುಬಿಡುತ್ತಿದ್ದೀಯಲ್ಲಾ." ಅದಲ್ಲದೆ, ಒಂದು ದೀಪದ ಕಡೆ ಎರಡನ್ನು ಬೆಳಗಿಸಿಟ್ಟರೆ ಅವರು ಅತೃಪ್ತಿ ತೋರುತ್ತಿದ್ದರು. ಹಾಗೂ ಯಾವುದೇ ಸಾಮಾನನ್ನು ಕೆಲಸವಾದ ಮೇಲೆ, ಅದಕ್ಕೆ ನಿಗದಿಯಾದ ಜಾಗದಲ್ಲಿಯೇ ಇಡಬೇಕು ಎನ್ನುತ್ತಿದ್ದರು. ಯಾವುದೇ ಕೆಲಸದಲ್ಲಿ ಅಸಡ್ಡೆಯಾಗಲಿ, ಅಜಾಗರೂಕತೆಯಾಗಲಿ ಸಲ್ಲದು ಎಂದು ಹೇಳುತ್ತಿದ್ದರು.

ಒಂದು ದಿನ ಯೋಗಿನ್‌ನನ್ನು (ಮುಂದೆ ಸ್ವಾಮಿ ಯೋಗಾನಂದರು) ಒಂದು ಬಾಂಡಲೆಯನ್ನು ತರಲು ಶ್ರೀರಾಮಕೃಷ್ಣರು ಕಳಿಸಿದ್ದರು. ಯೋಗಿನ್ ಅಂಗಡಿಗೆ ಹೋದನು. ವ್ಯಾಪಾರಿ ಕೊಟ್ಟಿದ್ದನ್ನು ತಂದು ನೀಡಿದನು. ಶ್ರೀರಾಮಕೃಷ್ಣರು ಆ ಬಾಂಡಲೆಯನ್ನು ಚೆನ್ನಾಗಿ ಪರೀಕ್ಷಿಸಿದರು. ಅದರಲ್ಲಿ ಬಿರುಕುಬಿಟ್ಟಿರುವುದನ್ನು ಗಮನಿಸಿದರು. ಇದನ್ನು ನೋಡಿ ಹೀಗೆ ಹೇಳಿದರು: "ಭಕ್ತನಾಗಿರಬೇಕು, ಆದರೆ, ವ್ಯವಹಾರದಲ್ಲಿ ಅಯೋಗ್ಯನಾಗಿರಬೇಕೇನು? ಒಂದು ಸಾಮಾನನ್ನು ಕೊಂಡುಕೊಳ್ಳುವುದಕ್ಕೆ ಮೊದಲು, ಹಲವು ಅಂಗಡಿಗಳಲ್ಲಿ ವಿಚಾರಿಸಬೇಕು. ಹಾಗೂ ಸಾಮಾನನ್ನು ಕೊಳ್ಳುವಾಗ ಅದನ್ನು ಪರೀಕ್ಷಿಸಬೇಕು. ವ್ಯಾಪಾರಿ ಹೇಳುವುದನ್ನು ಸುಮ್ಮನೆ ನಂಬಿಬಿಡಬಾರದು. ಅವನೇನು ಧರ್ಮಕ್ಕಾಗಿ ವ್ಯಾಪಾರ ಮಾಡುತ್ತಿಲ್ಲ. ಕೆಲವು ಸಾಮಾನುಗಳನ್ನು ಕೊಂಡರೆ, ಕೊಸರನ್ನು ಕೊಡುತ್ತಾರೆ. ಅದನ್ನು ಕೇಳುವುದಕ್ಕೆ ಮರೆತೆಯೇಕೆ? " (ಮಾರ್ಚ್ ೧೫ –ಗ್ರಾಹಕರ ದಿನ) (**ಸಂಗ್ರಹ** : ಸೇವಂತಿ ಡಿ.ರೈ)